ಎಂ.ವಿ.ಸಿ. 953/2022 c/w
954/2022, ಪಿ.ಡಬ್ಲ್ಯೂ2

**ದಿಃ03-04-2024 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ವಿ ವಕೀಲರಿಂದಃ-**

ನನ್ನ ತಂದೆ ತಿಪ್ಪೇಶಪ್ಪನಿಗೆ 3 ಜನ ಮಕ್ಕಳು. ನಾನು ಮತ್ತು ನನ್ನ ಅಕ್ಕ ಲತಾ ಮತ್ತು ಮೃತ ವೆಂಕಟೇಶ ನನ್ನ ಅಣ್ಣನಾಗಬೇಕು. ಇವರನ್ನು ಹೊರತು ಪಡಿಸಿ ಬೇರೆ ಯಾರು ವಾರಸುದಾರರು ಇಲ್ಲ ಮೃತ ವೆಂಕಟೇಶ ಮದುವೆ ಆಗಿರಲಿಲ್ಲ. ನಾನು ಮದುವೆ ಆಗಿಲ್ಲ ನನ್ನ ಅಕ್ಕ ಕೂಡ ಮದುವೆ ಆಗಿಲ್ಲ.

ನಾನು ಅಪಘಾತ ನೋಡಿಲ್ಲ. ಅಪಘಾತ ಹೇಗೆ ಆಯಿತು ಎಂದು ನಂತರ ಗೊತ್ತಾಯಿತು. ಪರಿಚಯದವರು ಜಗದೀಶ ಮತ್ತು ಜಯಸಿಂಹ ರವರು ಹೇಳಿ ಅಪಘಾತ ಹೇಗೆ ಆಯಿತು ಎಂದು ಗೊತ್ತಾಯಿತು ಮೋಟಾರ್ ಸೈಕಲ್ ನನ್ನ ಅಣ್ಣ ವೆಂಕಟೇಶನ ಪರಿಚಯದವರಿಗೆ ಸೇರಿದ್ದಾಗಿತ್ತು. ಬೈಕಿನಲ್ಲಿ ಎಷ್ಟು ಜನ ಹೋಗುತಿದ್ದರು ಯಾರು ಚಲಾಯಿಸುತಿದ್ದರು ಗೊತ್ತಿಲ್ಲ.

ಈ ಪ್ರಕರಣದಲ್ಲಿ ಪೊಲೀಸರಿಗೆ ದೂರು ನಾನೇ ನೀಡಿದ್ದೇನೆ. ಬೇರೆಯವರು ಹೇಳಿ ಗೊತ್ತಾದ ವಿಷಯವನ್ನು ದೂರಿನಲ್ಲಿ ಕಾಣಿಸಿದ್ದೇನೆ. ಶಿವನಿಯಿಂದ ಬಾಣೂರಿಗೆ ವೆಂಕಟೇಶ ಬೈಕಿನಲ್ಲಿ ಹೋಗುತಿದ್ದರು ಆಗ ಬರುವಾಗ ಸರಿಯಾಗಿ ಬರುತಿದ್ದಾಗ ಟಾಟಾ ಎ ಸಿ ವಾಹನ ನಿರ್ಲಕ್ಷತನದಿಂದ ಅಪಘಾತ ಆಯಿತು ಎಂದು ಗೊತ್ತಾಯಿತು. ಈ ಸಂಗತಿ ಕೂಡ ಜಗದೀಶ ಮತ್ತು ಜಯಸಿಂಹ ಹೇಳಿ ಗೊತ್ತಾಯಿತು. ಮರುದಿನ 16 ನೇ ತಾರೀಖು ದೂರು ನೀಡಿರುತ್ತೇನೆ. ಮೊದಲನೇ ದಿನ ನಮಗೆ ಶಾಕ್ ಆಗಿತ್ತು ಮತ್ತು ದುಃಖದಲ್ಲಿದ್ದೆವು. ದೂರಿನ ಪ್ರಕಾರ ನನ್ನ ಅಣ್ಣ ಬೈಕ್ ಚಲಾಯಿಸುತಿದ್ದರು ಆತನಿಗೆ ಡಿಎಲ್ ಇತ್ತು ಅದನ್ನು ನಾನು ನೋಡಿದ್ದೇನೆ ಅದು ಕಳೆದು ಹೋಗಿದೆ ಆದ್ದರಿಂದ ನ್ಯಾಯಾಲಯಕ್ಕೆ ಹಾಜರು ಮಾಡಲು ಆಗುವುದಿಲ್ಲ. ವೆಂಕಟೇಶನಿಗೆ ಯಾವುದೇ ಡಿಎಲ್ ಇರಲಿಲ್ಲ ಆತನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಆದರೂ ಸಹ ನಾನು ಮತ್ತು 1 ನೇ ಎದರುದಾರ ಪರಸ್ಪರ ಶರೀಕಾಗಿ ಟಾಟಾ ಎಸಿ ಚಾಲಕನ ವಿರುದ್ದ ಸುಳ್ಳು ದೂರು ಕೊಡಲಾಗಿದೆ ಎಂದರೆ ಸರಿಯಲ್ಲ. ಮತ್ತು ಟಾಟಾ ಎಸಿ ವಾಹನವನ್ನು ಪ್ರಕರಣದಲ್ಲಿ ಸೇರಿಸುವ ಉದ್ದೇಶಕ್ಕಾಗಿ ಒಂದು ದಿನ ತಡವಾಗಿ ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ಅಕ್ಕ ಇಬ್ಬರೂ ಕೂಡ ಯಾವುದೇ ಕೆಲಸ ಮಾಡುತ್ತಿಲ್ಲ ಮನೆಯಲ್ಲಿದ್ದೇವೆ ನನ್ನ ತಂದೆ ತಾಯಿ ಏನು ಕೆಲಸ ಮಾಡುವುದಿಲ್ಲ. ಮೃತ ವೆಂಕಟೇಶ ನಮ್ಮನ್ನೆಲ್ಲಾ ನೋಡಿಕೊಳ್ಳುತಿದ್ದನು ಆತ ಕೂಲಿ ಕೆಲಸ ಮತ್ತು ವ್ಯಾಪಾರ ಎರಡನ್ನು ಮಾಡುತಿದ್ದನು. ನನ್ನ ತಂದೆಯ ಹೆಸರಿಗೆ ಜಮೀನು ಇದೆ ಆದರೆ ಅದನ್ನು ಉಳುಮೆ ಮಾಡುವವರು ಇಲ್ಲ ಒಂದು ಎಕರೆ ಇರಬಹುದು ದಾಖಲೆ ಸರಿಯಾಗಿ ನೋಡಿಲ್ಲ. ಮೃತ ವೆಂಕಟೇಶ ಕೂಲಿ ಕೆಲಸ ಹಾಲಿನ ವ್ಯಾಪಾರ ಮಾಡಿ ದುಡಿಯುತಿದ್ದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ಆ ರೀತಿ ಮಾಸಿಕ 30 ಸಾವಿರ ದುಡಿಯುತಿದ್ದ ಬಗ್ಗೆ ನ್ಯಾಯಾಲಯಕ್ಕೆ

ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ಆ ರೀತಿ ಯಾವುದೇ ಆದಾಯ ಇರಲಿಲ್ಲ ಮತ್ತು ಆತನೇ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ನಾವು ಸ್ವಂತ ದುಡಿಮೆಯಿಂದ ಜೀವನ ನಡೆಸುತಿದ್ದೇವೆ ಎಂದರೆ ಸರಿಯಲ್ಲ. ಆದರೂ ಸಹ ಮೃತ



ವೆಂಕಟೇಶನ ಮೇಲೆ ನಾವು ಅವಲಂಬಿತರಾಗಿದ್ದೆವು ಎಂದು ಪರಿಹಾರ ಪಡೆಯುವ ಉದ್ದೇಶಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮತ್ತು ಮೃತನ ಶವಸಂಸ್ಕಾರಕ್ಕೆ ಒಂದು ಲಕ್ಷ ಖರ್ಚು ಮಾಡಿದ್ದಾಗಿ ಸುಳ್ಳು ಹೇಳುತಿದ್ದು ಮೃತನ ತಪ್ಪಿನಿಂದ ಅಪಘಾತ ಆಗಿದ್ದು ನಾನು ಹೇಳಿದ ಟಾಟಾ ಎಸಿ ವಾಹನ ಸಂಖ್ಯೆ ಕೆಎ-8-7622 ನೇ ವಾಹನ ಅಪಘಾತದಲ್ಲಿ ಬಾಗಿಯಾಗಿಲ್ಲವಾದ್ದರಿಂದ ಈ ಎರಡನೇ ಎದುರುದಾರರು ಯಾವುದೇ ರೀತಿ ಪರಿಹಾರ ಕೊಡಲು ಬಾಧ್ಯಸ್ತರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ

**ದಿ:03-04-2024 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ ಎಸ್ ವಿ ವಕೀಲರಿಂದ:-**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸ್ವಂತ ಊರು ಬಾಳೂರು ಅಜ್ಜಂಪುರ ತಾಲ್ಲೂಕು. ಪ್ರಸ್ತುತ ಗುಂಡಿಮಡು ಹೊಳಲ್ಕೆರೆ ತಾಲ್ಲೂಕಿನಲ್ಲಿ ವಾಸವಾಗಿದ್ದೇನೆ. ನನಗೆ ಬಾಳೂರು ಗ್ರಾಮದ ಆದಾರ್ ಕಾರ್ಡ ಇದೆ. ಅಪಘಾತ ಆದ ನಂತರ ನಾನು ಗುಂಡಿಮಡು ನಲ್ಲಿ ವಾಸವಾಗಿದ್ದೇನೆ. ಗುಂಡಿಮಡುನಲ್ಲಿ ವಾಸವಾಗಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ .

ನಾನು ವೆಂಕಟೇಶರವರಿಗೆ ಸೇರಿದ ಮೊಟಾರ್ ಸೈಕಲನಲ್ಲಿ ಅಪಘಾತ ಸುವಯದಲ್ಲಿ ಹೋಗುತಿದ್ದೆನು ಆತನೇ ಮೋಟಾರ್ ಸೈಕಲ್ ಚಾಲನೆ ಮಾಡುತಿದ್ದನು ಆತನಿಗೆ ಚಾಲನಾ ಪರವಾನಗಿ ಇತ್ತು. ಆತ ಹೇಳಿದ ಪ್ರಕಾರ ಆತನ ಡಿಎಲ್ ಕಳೆದು ಹೋಗಿದೆ. ನಾನು ಹಿಂಬದಿ ಸವಾರನಾಗಿ ಹೋಗುತಿದ್ದೆನು. ಬಾಳೂರು ಮತ್ತು ಶಿವನಿ ನಡುವೆ ಅಪಘಾತ ಆಗಿದೆ ಟಾಟಾ ಎಸಿ ವಾಹನ ಬಂದು ಡಿಕ್ಕಿಪಡಿಸಿತು. ನಮ್ಮ ಮುಂದಿನಿಂದ ಬಂದು ಡಿಕ್ಕಿಪಡಿಸಿತು. ನಾವು ರಸ್ತೆಯ ಎಡಬಾಗದಲ್ಲಿ ಹೋಗುತಿದ್ದೆವು ಅದು ಬಲಬಾಗದಿಂದ ಬಂದು ಡಿಕ್ಕಿಪಡಿಸಿತು ಅಪಘಾತ ಆದ ನಂತರ ನನಗೆ ಪ್ರಜ್ಞೆ ತಪ್ಪಿತ್ತು. ಜಯಸಿಂಹ ಮತ್ತು ಜಗದೀಶರವರು ಅಜ್ಜಂಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಪಘಾತದ ಬಗ್ಗೆ ವೈದ್ಯರಿಗೆ ಮಾಹಿತಿ ನಾನೇ ನೀಡಿರುತ್ತೇನೆ. ಮಾಹಿತಿ ನೀಡುವಾಗ ನಾನು ಎಚ್ಚರ ಇದ್ದೆ. ಯಾವುದೇ ಗೊತ್ತಿಲ್ಲದೇ ಇರುವ ವೆಹಿಕಲ್ ಅಪಘಾತ ಪಡಿಸಿದೆ ಎಂದು ಹೇಳಿಲ್ಲ ಟಾಟಾ ಎಸಿ ವಾಹನ ಅಪಘಾತ ಪಡಿಸಿದೆ ಎಂದು ಹೇಳಿದ್ದೇನೆ. ಯಾವುದೋ ಗೊತ್ತಿಲ್ಲದ ಗುರುತಿಲ್ಲದ ವಾಹನ ಅಪಘಾತ ಪಡಿಸಿ ಹೋಗಿದೆ ಎಂದು ನಾನು ವೈದ್ಯರ ಮುಂದೆ ಹೇಳಿದ್ದು ನಂತರದಲ್ಲಿ ಯೋಚಿಸಿ ಟಾಟಾ ಎಸಿ ವಾಹನ ಡಿಕ್ಕಿಪಡಿಸಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಸಣ್ಣ ಪುಟ್ಟ ಗಾಯ ಆಯಿತು ಎಂದರೆ ಸರಿ. ನಾನು ಗಾಯದಪ್ರಮಾಣಪತ್ರ ಪಡೆಯಲು ಹೋಗುವ ಕಾಲಕ್ಕೆ ವೈದ್ಯರ ಜೊತೆ ಶರೀಕಾಗಿ ಅನ್ ನೌನ್ ವೆಹಿಕಲ್ ಎಂಬ ಜಾಗದಲ್ಲಿ ಟಾಟಾ ಎಸಿ ನಂತರದಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿದ್ದಾರೆ. ಈ ಪ್ರಕರಣದ ದೂರನ್ನು ಜ್ಯೋತಿ ಎಂಬುವರು ನೀಡಿದ್ದಾರೆ. ಸದರಿಯವರು ವೆಂಕಟೇಶರವರ ಅಕ್ಕ. ನಾನೇ ನೇರವಾಗಿ ದೂರು ನೀಡಲು ನನಗೆ ತೊಂದರೆ ಇತ್ತು ಕಾರಣ ಬೇರೆಯವರು ದೂರು ಕೊಟ್ಟಿದ್ದಾರೆ ಎಂದು ತಿಳಿಯಿತು ಜ್ಯೋತಿಯವರು ಏನು ದೂರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಆಗಿ ಎಷ್ಟು ದಿನ ತಡವಾಗಿ ದೂರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ವೈದ್ಯರ ಮುಂದೆ ಟಾಟಾ ಎಸಿ ವಾಹನವನ್ನು ಸೇರಿಸುವ ಉದ್ದೇಶಕ್ಕೆ ಒಂದು ದಿನ ತಡವಾಗಿ ದೂರು ಕೊಡಿಸಿದ್ದೇವೆ ಎಂದರೆ ಸರಿಯಲ್ಲ.

ವೆಂಕಟೇಶ ಮೋಟಾರ್ ಸೈಕಲ ಗೆ ವಿಮೆ ಇತ್ತು. ಆತ ಹೇಳಿ ನನಗೆ ಗೊತ್ತು ನಾನು ದಾಖಲೆ

ನೋಡಿಲ್ಲ. ವೆಂಕಟೇಶನಿಗೆ ಡಿಎಲ್ ಇರಲಿಲ್ಲ. ವಿಮೆ ಇರಲಿಲ್ಲ ಮತ್ತು ಯಾವುದೋ ಗೊತ್ತಿಲ್ಲದ ವಾಹನ ಡಿಕ್ಕಿಪಡಿಸಿದ್ದರ ಪರಿಣಾಮ ಅಪಘಾತ ಆಗಿದ್ದು ಗೊತ್ತಿದ್ದರೂ ಸಹ ನಾವೆಲ್ಲಾರೂ ಪರಸ್ಪರ ಶರೀಕಾಗಿ ಪರಿಹಾರ ಪಡೆಯುವ ಉದ್ದೇಶಕ್ಕೆ ವಿಮೆ ಹೊಂದಿದ 1 ನೇ ಎದುರುದಾರನ ವಾಹನದ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನೇ ಎಚ್ಚರ ಇದ್ದು ಅನೌನ್ ವೆಹಿಕಲ್ ಎಂದು ವೈಧ್ಯರ ಮುಂದೆ ಹೇಳಿದ್ದು ಆ ಕಾರಣಕ್ಕೂ ಸಹ ಮತ್ತು ನಾನು ಹೇಳಿದ ಟಾಟಾ ಎಸಿ ವಾಹನ ಸಂಖ್ಯೆ ಕೆಎ-8-7622 ನೇ ವಾಹನ ಅಪಘಾತದಲ್ಲಿ ಬಾಗಿಯಾಗಿಲ್ಲವಾದ್ದರಿಂದ ಈ ಎರಡನೇ ಎದುರುದಾರರು ಯಾವುದೇ ರೀತಿ ಪರಿಹಾರ ಕೊಡಲು ಬಾಧ್ಯಸ್ತರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ